**ಸಾಕ್ಷಿಗೆ ದಿನಾಂಕಃ 16.6.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಪಾಟೀ ಸವಾಲು ಆರೋಪಿ ಪರ ವಕೀಲರಿಂದಃಃ

ನನ್ನ ಹೆಂಡತಿಗೆ ಸತೀಶ ಮತ್ತು ಮಾಲತೇಶ ಎಂಬ ಇಬ್ಬರು ತಮ್ಮಂದಿರು ಇದ್ದಾರೆ ಎಂದರೆ ಸರಿ. ಸದರಿ ಸತೀಶ ಮತ್ತು ಮಾಲತೇಶ ಎಂಬುವವರಿಗೆ ಮದುವೆಯಾಗಿದೆ. ಸದರಿ ಮಾಲತೇಶ ರವರ ಹೆಂಡತಿ ಹೆಸರು ರಶ್ಮಿ. ಚಾಸಾ-4 ಮಾಲತೇಶರವರ ಹೆಂಡತಿಯಾಗಿರುವುದಿಲ್ಲ. ಚಾಸಾ-4 ರವರ ಗಂಡನ ಹೆಸರು ಮಾಲತೇಶ್. ಚಾಸಾ-4 ರವರ ಮನೆ ರಾವೂರು ಮೇನ್ ಕ್ಯಾಂಪ್ ನಲ್ಲಿದೆ. ಚಾಸಾ-4 ರವರ ಗಂಡ ಮಾಲತೇಶ್ ರವರ ತಂದೆ-ತಾಯಿಯ ಹೆಸರು ನನಗೆ ಗೊತ್ತಿಲ್ಲ. ಚಾಸಾ-4 ರವರ ಗಂಡನೇ ನನ್ನ ಹೆಂಡತಿಯ ತಮ್ಮ ಮಾಲತೇಶ್ ಆಗಿರುತ್ತಾರೆಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ಮರೆಮಾಚುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಂಡತಿಯ ಮನೆಯವರ ವಂಶವೃಕ್ಷ ನಮ್ಮ ಮನೆಯಲ್ಲಿ ಇಲ್ಲ. ನನಗೆ ಬಿಳಾಲುಕೊಪ್ಪ ಹಂದೂರಿನಲ್ಲಿ ಒಂದುವರೆ ಎಕರೆ ಜಾಗದಲ್ಲಿ ನನ್ನ ತಂದೆಯ ಕಾಲದಿಂದಲೂ ಸಾಗುವಳಿ ಮಾಡುತ್ತಿದ್ದೆನು. ಸದರಿ ಜಮೀನಿನ ವಿಚಾರವಾಗಿ ಪ್ರಕರಣದಲ್ಲಿ ಹೇಳಲಾದ ಗಲಾಟೆಗೆ ಮುಂಚೆ ಜಗಳವಾಗಿದೆ ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಹೇಳಲಾದ ಗಲಾಟೆ ನಡೆಯುವಾಗ ನಾನು ಇದ್ದೆ. ಸದರಿ ಗಲಾಟೆಯ ಶಬ್ದ ಕೇಳಿ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದೆ ಎಂಬುದಾಗಿ ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಸದರಿ ಗಲಾಟೆ ಆರಂಭವಾದಾಗಿನಿಂದ ಚಾಸಾ-1 ರಿಂದ 5 ರವರು ಇದ್ದೆವು. ಚಾಸಾ-1 ರವರು ನನ್ನ ಮಗನನ್ನು ಅವನ ಚಿಕ್ಕಮ್ಮನ ಮನೆಯಿಂದ ಕರೆದುಕೊಂಡು ಬರಲು ಹೋಗಿದ್ದರು ಆ ಸಂದರ್ಭದಲ್ಲಿ ನಾನು ಸಹ ಚಾಸಾ-1 ರವರನ್ನು ಹಿಂಬಾಲಿಸುತ್ತಿದ್ದೆ. ಸದರಿ ಚಾಸಾ-1 ರವರು ನನ್ನ ಮಗನನ್ನು ಕರೆದುಕೊಂಡು ವಾಪಸ್ಸು ಬರುವಾಗ್ಗೆ ಘಟನೆ ನಡೆದ ಸ್ಥಳಕ್ಕೆ ನಾನು ಸಹ ಬಂದಿದ್ದೆ. ಆರೋಪಿತರು ಸುಮಾರು 11 ಗಂಟೆ ಸಮಯಕ್ಕೆ ಚಾಸಾ-1 ರವರು ನನ್ನ ಮಗನನ್ನು ವಾಪಸ್ಸು ಕರೆದುಕೊಂಡು ಬರುವ ಸಮಯಕ್ಕೆ ಅಡ್ಡಗಟ್ಟಿ ಗಲಾಟೆ ಮಾಡಿರುತ್ತಾರೆ. ನಾನು ಆರೋಪಿತರಿಗೆ ಜಮೀನಿನ ವಿಚಾರವಾಗಿ ಯಾವುದೇ ವಿಷಯವನ್ನು ಮಾತನಾಡಿರುವುದಿಲ್ಲ. ಆರೋಪಿತರೇ ಬಿಳಾಲುಕೊಪ್ಪ ಹಂದೂರಿನಲ್ಲಿರುವ ಜಮೀನಿನ ವಿಚಾರವಾಗಿ ಚಾಸಾ-1 ರವರ ಬಳಿ ಗಲಾಟೆ ಮಾಡಿರುತ್ತಾರೆ. ಸದರಿ ಗಲಾಟೆ ಅರ್ಧ ಗಂಟೆಗೂ ಹೆಚ್ಚು ಕಾಲ ಆಗಿರುತ್ತದೆ. ಆ ಸಂದರ್ಭದಲ್ಲಿ ಸ್ಥಳೀಯರು ಅವರ ಮನೆಗಳ ಬಳಿ ಇದ್ದರು. ಗಲಾಟೆಯಾದ ತಕ್ಷಣ ನಾನು ಚಾಸಾ-1 ರವರನ್ನು ದ್ವಿಚಕ್ರವಾಹನದಲ್ಲಿ ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋದೆ. ನಾನು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ

ದಾರಿಯಲ್ಲಿ ಪೊಲೀಸ್ ಠಾಣೆ ಇರುವುದಿಲ್ಲ. ಕೃತ್ಯ ನಡೆದ ಸ್ಥಳದಿಂದ ಸದರಿ ಆಸ್ಪತ್ರೆಗೆ ಸುಮಾರು 3-4 ಕಿ ಮೀ ಅಂತರದಲ್ಲಿದೆ. ಆಸ್ಪತ್ರೆಯಲ್ಲಿ ವೈದ್ಯರ ಬಳಿ ನಾನೇ ಚಾಸಾ-1 ರವರನ್ನು ಕರೆದುಕೊಂಡು ಹೋಗಿದ್ದೆ. ಆಸ್ಪತ್ರೆಯಲ್ಲಿ ವೈದ್ಯರ ಬಳಿ ಸದರಿ ಗಲಾಟೆಯ ವಿಚಾರ ನಾನೇ ತಿಳಿಸಿದೆ. ನಾವು ಆ ದಿನ ಪೊಲೀಸ್ ಠಾಣೆಗೆ ಹೋಗಲಿಲ್ಲ. ವೈದ್ಯರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರ ಮೇರೆಗೆ ಪೊಲೀಸರೇ ಆಸ್ಪತ್ರೆಗೆ ಬಂದಿದ್ದರು. ಈ ಪ್ರಕರಣದಲ್ಲಿ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಪೊಲೀಸರು ಅದೇ ದಿನ 3-45 ಗಂಟೆಯ ಸುಮಾರಿಗೆ ಫೋನ್ ಕರೆ ಮಾಡಿ ಕೃತ್ಯ ನಡೆದ ಸ್ಥಳದ ಮಹಜರ್ ಮಾಡಬೇಕಾಗಿರುವುದರಿಂದ ಸ್ಥಳಕ್ಕೆ ಆಗಮಿಸುವಂತೆ ನನಗೆ ತಿಳಿಸಿದರು. ನಾನು ಸದರಿ ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಪೊಲೀಸರು ಆ ವೇಳೆಗಾಗಲೀ ಚಾಸಾ-6 ಮತ್ತು 7 ರವರನ್ನು ಕರೆಸಿದ್ದರು. ಚಾಸಾ-6 ನನ್ನ ದೊಡ್ಡಪ್ಪನ ಮಗ ಎಂದರೆ ಸರಿಯಲ್ಲ. ಚಾಸಾ-7 ನನ್ನ ತಂಗಿ ಮಗ ಎಂದರೆ ಸರಿಯಲ್ಲ.

ನನ್ನ ಭಾವನ ಹೆಸರು ಕುಮಾರ್. ನನ್ನ ಭಾವ ಕುಮಾರ್ ರವರ ಮಗನ ಹೆಸರು ಪ್ರಮೋದ್ ಎಂದರೆ ಸರಿಯಲ್ಲ. ನನಗೆ ತಂಗಿ ಇಲ್ಲ. ನಿಪಿ-5 ರಲ್ಲಿರುವ ವಿಚಾರಗಳನ್ನು ನಾನು ಹೇಳಿದ ನಂತರ ಪೊಲೀಸರು ಬರೆದುಕೊಂಡಿರುತ್ತಾರೆ, ತದನಂತರ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ನ್ಯಾಯಾಲಯದ ಮುಂದಿರುವ ಎಂಓ-2 ನ್ನು ಅದೇ ದಿನ ಜಪ್ತಿ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ನಾನು ಹೇಳಿದಂತೆ ಯಾವುದೇ ಗಲಾಟೆಯಾಗಿರುವುದಿಲ್ಲ, ಹಲ್ಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾನು ನನ್ನ ಹೆಂಡತಿ ಮತ್ತು ನನ್ನ ಮಗ ಮತ್ತು ಸಂಬಂಧಿಕರ ಜೊತೆಗೂಡಿ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಪ್ರಕರಣ ದಾಖಲಾಗುವಂತೆ ಮಾಡಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ನಿಪಿ-5 ರಂತೆ ಕೃತ್ಯ ನಡೆದ ಸ್ಥಳ ಮತ್ತು ಜಪ್ತಿ ಪಂಚನಾಮೆಯನ್ನು ಸ್ಥಳದಲ್ಲಿಯೇ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃ ಮರು ವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

**Sd/-**
ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ